**ಸಾಕ್ಷಿಯನ್ನು ದಿನಾಂಕಃ 16.07.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:**

ವಾದಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವೇಯಲ್ಲಿ ವಾದಿ ವಿವರಿಸಿರುವಂತೆ ವಿಸ್ತೀರ್ಣ ಮತ್ತು ಚೆಕ್ಕುಬಂದಿ ವಾಸ್ತವದಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ವಾದಿಯ ಕ್ರಯ ಪತ್ರ ಮತ್ತು ಖಾತೆ ಪಹಣಿಯನ್ನು ಪ್ರಶ್ನೆ ಮಾಡಿದ್ದೇನೆ. ಆ ರೀತಿ ಪಂಚಾಯಿತಿಯಲ್ಲಿ ಪ್ರಶ್ನೆ ಮಾಡಿರುತ್ತೇನೆ. ದಾವಾ ಆಸ್ತಿಯನ್ನು ನಮ್ಮ ತಾತ ಖರೀದಿ ಮಾಡಿದ್ದರು ಮತ್ತು ನಮಗೆ ಹಕ್ಕು ಇದೆ ಎಂದು ಪ್ರಶ್ನೆ ಮಾಡಿರುತ್ತೇವೆ. 2017ಕ್ಕೂ ಮುನ್ನಾ ದಾವಾ ಆಸ್ತಿ ಮೂಲ ಮಾಲೀಕರು ಮೂಡ್ಲಗಿರಯ್ಯ ಮತ್ತು ಆತನ ಕುಟುಂಬದವರು ಎಂದರೆ ಸಾಕ್ಷಿಯು ಮೂಡ್ಲಗಿರಯ್ಯನ ಹೆಸರಿನಲ್ಲಿ ಏನು ಇರದೇ, ಮೂರನೆಯವರ ಹೆಸರಿನಲ್ಲಿ ದಾಖಲೆ ಇದ್ದು, ಇತ್ತೀಚೆಗೆ ಮೂಡ್ಲಗಿರಯ್ಯ ಯಾರಿಗೂ ಗೊತ್ತಿಲ್ಲದಂತೆ ಖಾತೆ ಮಾಡಿಸಿಕೊಂಡು ವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮೂಡ್ಲಗಿರಯ್ಯ ತನ್ನ ಹೆಸರಿಗೆ ಬಣಾವಟ್ಟು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನನ್ನ ತಕರಾರಿನಲ್ಲಿ ಹೇಳಿರಲಿಲ್ಲ. ಮೂಡ್ಲಗಿರಯ್ಯ ಕಾನೂನು ಬದ್ದ ಕ್ರಯ ಪತ್ರ ಮಾಡಿಕೊಟ್ಟಿರುವ ಕಾರಣ ಆ ರೀತಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೂಡ್ಲಗಿರಯ್ಯ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1ಕ್ಕೂ ಮೊದಲು ವಾದಿಯಾಗಲೀ ಅಥವಾ ಅವರ ಕುಟುಂಬದವರಾಗಲೀ ಅಥವಾ ಸಂಬಂಧಿಕರಾಗಲೀ ಮಾಲೀಕರಾಗಿಲ್ಲ ಎಂದರೆ ಸಾಕ್ಷಿಯು ತನ್ನ ಗಂಡ, ಮುನಿಸ್ವಾಮಿ ಅಪ್ಪ ಮತ್ತು ಸಿದ್ದಪ್ಪ ಮಾಲೀಕರಾಗಿದ್ದರು ಎಂದು ನುಡಿಯುತ್ತಾರೆ. 2017ಕ್ಕೂ ಮೊದಲು ತನ್ನ ಗಂಡ, ಮುನಿಸ್ವಾಮಿ ಅಪ್ಪ ಮತ್ತು ಸಿದ್ದಪ್ಪ ಮಾಲೀಕರಾಗಿದ್ದರು ಎಂದು ದಾಖಲೆ ಇರುತ್ತದೆ. ಸದರಿ ದಾಖಲೆ ಪಂಚಾಯಿತಿ ಪಾರಿಖತ್ ಆಗಿರುತ್ತದೆ. ಸದರಿ ಪಾರಿಖತ್ ಅನ್ನು ನಾನು ನೋಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ

ಪಾರಿಖತ್ ಅನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿಯ ಹುಟ್ಟೂರು ರಂಗಮ್ಮನಪಾಳ್ಯ. ವಾದಿಯು 10ನೇ ತರಗತಿ ಅನುತ್ತೀರ್ಣರಾಗಿರುತ್ತಾರೆ. ವಾದಿ ಎಲ್ಲೂ ಹೋಗದೇ ಊರಿನಲ್ಲಿ ಇದ್ದರು. ವಾದಿ ನಮ್ಮ ಕುಟುಂಬದ ಯಜಮಾನ ಅಲ್ಲ. ವಾದಿ ಆತನ ಕುಟುಂಬದಲ್ಲೂ ಯಜಮಾನ ಅಲ್ಲ. ನಿಪಿ.1ರ ವಿಚಾರ ಊರಿನವರಿಗೆ ಮತ್ತು ನಮಗೆ ಗೊತ್ತು ಎಂದರೆ ಸರಿಯಲ್ಲ. ನಿಪಿ.1 ಸರಿ ಇಲ್ಲ ಎಂದು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲು ನೀಡಿರುತ್ತೇನೆ. ಆ ಕುರಿತು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ವಾದಿ ನೋಟಿಸ್ ನೀಡಿದ್ದಾಗ, ಕ್ರಯಪತ್ರ ತಿಳಿದು ದಾವೇಗೆ ತಾನು ಹಾಜರಾಗಿರುತ್ತೇನೆ ಎಂದು ನುಡಿಯುತ್ತಾರೆ.

3. 2017ಕ್ಕೂ ಮೊದಲು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದವರ ಹೆಸರು ಸ್ವಾಧೀನ ಮತ್ತು ಖಾತೆದಾರರ ಕಲಂ ನಲ್ಲಿ ಬರುತ್ತಿತ್ತು ಎಂದರೆ ಸರಿ. ಮೂಡ್ಲಗಿರಯ್ಯ ಮತ್ತು ಗಂಗಮ್ಮನಿಗೆ 2017ರಲ್ಲಿ ಜಂಟಿ ಖಾತೆ ಇತ್ತು ಎಂದರೆ ಸರಿ. ಸದರಿ ಆಸ್ತಿ ಮೂಡ್ಲಗಿರಯ್ಯನಿಗೆ ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ಪೂವರ್ಜರ ಕಾಲದಿಂದಲೂ ಮೂಡ್ಲಗಿರಯ್ಯ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿಯು 1994ರಲ್ಲಿ ಮೂಡ್ಲಗಿರಯ್ಯ ಹಣ ಪಡೆದು, ತನ್ನ ಗಂಡ, ವಾದಿಯ ಅಪ್ಪ ಮತ್ತು ಸಿದ್ದಪ್ಪನಿಗೆ ಸ್ವಾಧೀನ ಬಿಟ್ಟುಕೊಟ್ಟಿದ್ದರು. ಮೂಡ್ಲಗಿರಯ್ಯ ತನ್ನ ಹೆಸರಿನಲ್ಲಿ ಖಾತೆ ಇರದ ಕಾರಣ, ದಾಖಲೆ ಮಾಡಿಕೊಡುವುದಾಗಿ ಹೇಳಿ ಸ್ವಾಧೀನ ಬಿಟ್ಟು ಕೊಟ್ಟಿದ್ದರು. ನಿಪಿ.1ನ್ನು ಓದಿದ್ದೀರಾ ಎಂದರೆ ಸಾಕ್ಷಿಯು ತಾನು ಅವಿದ್ಯಾವಂತಳು ಎಂದು ನುಡಿಯುತ್ತಾರೆ. ನಾನು ಹೇಳಿದಂತೆ 1994ರಲ್ಲಿ ಮೂಡ್ಲಗಿರಯ್ಯ ನಮಗೆ ಸ್ವಾಧೀನ ಬರೆದುಕೊಟ್ಟಿದ್ದರು ಎಂದು ತೋರಿಸಲು ಏನು ದಾಖಲೆ ಇದೆ ಎಂದರೆ ಸಾಕ್ಷಿಯು ತಮ್ಮ ಕುಟುಂಬದಲ್ಲಿ ಆದ ಪಾರಿಖತ್ ನಲ್ಲಿ ಆ ಕುರಿತು ಬರೆದ ದಾಖಲೆ ಎಂದು ನುಡಿಯುತ್ತಾರೆ.

4. ನಾನು ಹೇಳುವ ಪಾರಿಖತ್ 1994ರ ನಂತರ ಆಗಿರುತ್ತದೆ. ಸದರಿ ಪಾರಿಖತ್ ನಂತೆ ನಮ್ಮ ಕುಟುಂಬದಲ್ಲಿ ಯಾರಿಗೂ ಖಾತೆಯಾಗಿರಲಿಲ್ಲ. ಸದರಿ ಪಾರಿಖತ್ ಆಗುವ ಸಮಯಕ್ಕೆ ನಮ್ಮ ಕುಟುಂಬದ ಯಜಮಾನಿಕೆಯನ್ನು ನನ್ನ ಗಂಡನ ಅಣ್ಣ ಸಿದ್ದಪ್ಪ ಮಾಡುತ್ತಿದ್ದರು. ಮೂಡ್ಲಗಿರಯ್ಯ ಆ ರೀತಿ ಸ್ವಾಧೀನ ಬಿಟ್ಟುಕೊಟ್ಟ ಬಗ್ಗೆ ವಾದಿಯ ಕುಟುಂಬದವರನ್ನಾಗಲೀ ಸಿದ್ದಪ್ಪನವರ ಕುಟುಂಬದವರನ್ನಾಗಲೀ ವಿಚಾರಣೆ ಮಾಡಿಸಬಹುದೇ ಎಂದರೆ ಸಾಕ್ಷಿಯು ಅವರಿಬ್ಬರೂ ಒಂದಾಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಸಿದ್ದಪ್ಪ ಸ್ವಾಧೀನದಲ್ಲಿ ಇದ್ದಾರೆಯೇ ಎಂದರೆ ಸಾಕ್ಷಿಯು ವಾದಿಯ ತಂದೆ ಮತ್ತು ಸಿದ್ದಪ್ಪ ಎರಡು ಭಾಗದಲ್ಲಿ ಅಡಿಕೆ ಗಿಡ ಹಾಕಿದ್ದಾರೆ ಮತ್ತು ನಮ್ಮ ಭಾಗ ಖಾಲಿ ಇದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಮ್ಮ ತಕರಾರಿನಲ್ಲಿ ಹೇಳಿಲ್ಲ. ದಾವಾ ಸ್ವತ್ತಿನಲ್ಲಿರುವ ಅಡಿಕೆ ಸಸಿಗಳ ವಯಸ್ಸು 28 ವರ್ಷಗಳು ಇರಬಹುದು.

5. ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಭಾಗಾಂಶಕ್ಕಾಗಿ ನಾನು ದಾವೇ ಹೂಡಿದ್ದೇನೆ. ನಾನು ಹೇಳಿದಂತೆ ನನ್ನ ಗಂಡ, ವಾದಿಯ ತಂದೆ ಮತ್ತು ಸಿದ್ದಪ್ಪ ಮೂರು ಜನರು ವಿಭಾಗ ಮಾಡಿಕೊಂಡಿದ್ದರೇ ಏಕೆ ದಾವೇ ಹೂಡಿದ್ದೀರಾ ಎಂದರೆ ಸಾಕ್ಷಿಯು ಖಾತೆ ಪಹಣಿ ಮಾಡಿಕೊಡಿ ಎಂದು ಕೇಳಿದಾಗ, ಮಾಡಿಕೊಡದ ಕಾರಣ, ದಾವೇ ಹೂಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮೌಲ್ಯ 2017ರಲ್ಲಿ ರೂ.1 ಲಕ್ಷ ಇತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಮೂಡ್ಲಗಿರಯ್ಯನಿಗೆ ರೂ.1 ಲಕ್ಷ ಹಣ ಮುನಿಸ್ವಾಮಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಸಿದ್ದಪ್ಪ ಮತ್ತು ವಾದಿ ದಾರಿ ಬಿಡುತ್ತೇನೆ ಎಂದು ಹೇಳಿ ದಾವಾ ಆಸ್ತಿಯನ್ನು ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಮೂಡ್ಲಗಿರಯ್ಯನಿಗೆ ದಾರಿ ಬಿಟ್ಟಿಲ್ಲ. ಸದರಿ ವ್ಯವಹಾರಕ್ಕೆ ನಾನು ಸೇರಿಲ್ಲ. ಸದರಿ ವಿಚಾರ ತಹಶೀಲ್ದಾರ್ ಕಚೇರಿಯಲ್ಲಿ ತಕರಾರು ಕೊಟ್ಟಾಗ ತಿಳಿಯಿತು.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.